ವಾರಸುದಾರನಾಗಿದ್ದುದರಿಂದ ಆ ಕಾರ್ಯವನ್ನು ಅವಳ ಗಂಡ ಕೃಷ್ಣಪ್ಪ ಮಾಡಬೇಕಾಗಿತ್ತು.

ದೀವಣಿಗೆ ಹಬ್ಬದ ಮರುದಿನದ ರಾತ್ರಿ ಕಲ್ಲು ನೀರು ಕರಗುವ ಹೊತ್ತಿಗೆ ಪೂಜೆ ಸಾಮಾಗ್ರಿಗಳನ್ನು ಮಾರಿಯ ದೇವಸ್ಥಾನದಿಂದ ಪೂಜಾರ ಹೆಂಜರಪ್ಪನ ತಲೆಮೇಲೆ ಕಳಸವನ್ನು ಹೊರಿಸಿಕೊಂಡು ಮೆರವಣಿಗೆಯ ಮೂಲಕ ಕೊಂಡೊಯ್ಯಲಾಯಿತು. ಇದನ್ನು ಚಿಕ್ಕ ಮಕ್ಕಳು ಮತ್ತು ಹೆಂಗಸರು ಯಾರು ನೋಡುವಂತಿರಲಿಲ್ಲ. ಹಾಗಾಗಿ ಆ ಆಚರಣೆಯಲ್ಲಿ ಕೇವಲ ವಯಸ್ಕ ಗಂಡಸರು ಮಾತ್ರ ನೆರದಿದ್ದರು. ಕೈವಾಡಸ್ಥರು ನೆರೆದಿದ್ದರು. ಮಡಿವಾಳರ ರುದ್ರಣ್ಣನು ಹಿಡಿದಿದ್ದ ಪಂಜು ಉರಿಯುತ್ತಿತ್ತು. ಓಲಗದವರು ತುಂಬ ಹುಮ್ಮಸ್ಸಿನಿಂದ ತಮ್ಮ ವಾದ್ಯಗಳನ್ನು ಬಾರಿಸುತ್ತಿದ್ದರು. ಪೂಜಾರ ಹೆಂಜರಪ್ಪ ಗುಡ್ಡೆಕಲ್ಲಿಗೆ ತುಂಬಿದ ಗಡಿಗೆಯಲ್ಲಿ ತಂದಿದ್ದ ನೀರನ್ನು ಹಾಕಿ ಅದನ್ನು ಸ್ವಚ್ಛಗೊಳಿಸಿ ಅರಿಸಿನ, ಕುಂಕುಮ ಇಟ್ಟು, ಹೂವುಗಳನ್ನು ಮುಡಿಸಿ, ಸುತ್ತ ಹಾಕಿ ಪೂಜೆ ಸಲ್ಲಿಸಿದ. ಇದಾದ ಬಳಿಕ ರುದ್ರಣ್ಣನ ಪಂಜಿನ ಸೇವೆ. ದೇವಸ್ಥಾನದ ಗೌಡ ಪೂಜೆ ಸಲ್ಲಿಸಿ ಕೃಷ್ಣಪ್ಪನಿಗೆ ಊರಿನ ಗಣ್ಯರ ಸಮ್ಮುಖದಲ್ಲಿ ವೀಳ್ಯವನ್ನು ಕೊಟ್ಟು ಬಲಿಕಾರ್ಯವನ್ನು ನೆರವೇರಿಸಲು ಅನುಮತಿಯನ್ನು ಕೊಟ್ಟರು. ಕೃಷ್ಣಪ್ಪ ಇಸಿದುಕೊಂಡಿದ್ದ ವೀಳ್ಯವನ್ನು ಎರಡೂ ಕೈಗಳಲ್ಲಿ ಹಿಡಿದುಕೊಂಡು ಗುಡ್ಡೆಕಲ್ಲನ್ನು ಮೂರು ಸಲ ತಿರುಗಿಬಂದು ಮತ್ತೆ ಅದರ ಎದುರಿಗೆ ಬಂದು, ನೆರೆದಿದ್ದ ಊರಿನ ಗಣ್ಯರನ್ನು ಉದ್ದೇಶಿಸಿ, 'ತೋಟಿ ತಳವಾರರು ಹನ್ನೆರಡು ಜನ ಕೈವಾಡಸ್ಥರು ಮರಿ ಕಡಿಯಕೆ ಅಪ್ಪಣೆ ಕೊಡ್ತಿರೇನಪ್ಪ' ಎಂದು ಮೂರು ಸಲ ಜೋರಾಗಿ ಕೇಳಿದ. ಅಲ್ಲಿ ನೆರೆದಿದ್ದವರು, 'ಅಪ್ಪಣೆ ಅಪ್ಪಣೆ ಅಪ್ಪಣೆ' ಎಂದು ಮೂರು ಸಲ ಒಕ್ಕೊರಲಿನಿಂದ ಹೇಳಿದರು. ತಾನು ಮನೆಯಿಂದ ತಂದಿದ್ದ ತನ್ನ ಪೂರ್ವಜರ ಕಾಲದ ಗಂಡುಗೊಡಲಿಯಿಂದ ಅದನ್ನು ಎರಡೂ

